135(2)

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 103] ಕಶ್ಯಪವಾರ 14—12—45 [ಬಿಡಿ ಪ್ರತಿ 3 ಪೈ

ಇಂಡೋನೇಷಿಯನರಿಗೆ ಮಿತ್ರರ ಬೆದರಿಕೆ

ಬಟಾವಿಯಾ ಡಿ 11— ಸಿಂಗಪುರದಲ್ಲಿ ಇಂಡೋನೇಸಿಕ್ ವ್ಯವಸ್ಥೆ ಬಗ್ಗೆ ಮಿತ್ರರ ಪರ ಮುಖಂಡರ ಸಮಿತಿಯು ಆದ ತೀರ್ಮಾನವು ಇಂಡೋನೇಷಿಯನ್ನರಿಗೆ ಹಿತಕರವಾಗಿಲ್ಲವೆಂದೂ, ಡಚ್ಚರೊಡನೆ ಅವರು ಸುಧಾನ ನಡೆಸಬೇಕೆಂದೂ, ತಪ್ಪಿದಲ್ಲಿ ಮಿತ್ರರ ಭಾರಿ ಸೈನ್ಯ ಕಾಸ್ಯಾಚಣೆಗೆ ತುತ್ತಾಗಬೇಕೆಂದೂ ಬೆದರಿಕೆ ಒಡ್ಡಿರುವರು.

o o

ಲಂಡನ್ ಡಿ 12— ಲಾರ್ಡ್ಸ್ ಸಭೆಯಲ್ಲಿ ನಾಳೆ ಲಾರ್ಡ್ ಹಾಹಾರವರ ವಿಚಾರಣೆ ಓಬೀರಾಯನ ಕಾಲದ ಮಾಗ್ನಾ ಚಾರ್ಟಾದ ಸಹಾಯದಿಂದಾದ ಮರಣದಂಡನೆ ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದಾನೆ ಈ ಭೂಪ !

o o

ಚಿತ್ತೂಸು ಡಿ 8 – ಬೆಂಗಳೂರಿನಿಂದ ಗುಡಿಯಾರಮ್ಮಗೆ ಸದರ್ಹ ಆರ್ಮಿಯ ಇಬ್ಬರು ಸಿವಿಲಿಯರ್ಹ ಡ್ರೈವರು ಮಿಲಿಟರಿ ಲಾರಿಯಲ್ಲಿ ರೂ. 2500 ಬೆಲೆಯ ನೂಲನ್ನು ಸಾಗಿಸುತ್ತಿದ್ದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟರು.

o o

ಉತ್ತರ ಪರ್ಷಿಯಾ ಪರಿಸ್ಥಿತಿ ಬಗ್ಗೆ ಬ್ರಿಟಿ – ರಷ್ಯಾಗಳಲ್ಲಿ ಪತ್ರವ್ಯವಹಾರ ನಡೆಯುತ್ತಿರುವುದಾಗಿ ಗೊತ್ತಾಗಿದೆ

o o

ಆಜಾದ್ ಹಿಂದ್ ಪೌಜಿನವರಿಗೆ ಕಾಂಗ್ರೆಸಿನ ರಕ್ಷಣೆ ಅಗತ್ಯವೆಂದು ಸರೋಜಿನಿ ನಾಯ್ಡು ಹೇಳಿಕೆಯಾಗಿದೆ.

ನಾನೇ ಯುದ್ಧಕ್ಕೆ ಕಾರಣನಾದುದರಿಂದ ಸಿಂಹಾಸನ ತ್ಯಾಗ ಮಾಡುತ್ತೇನೆಂದು ಜಪಾನ್ ಚಕ್ರವರ್ತಿ ಹೇಳಿರುವುದಾಗಿ ಅನಧಿಕೃತವಾರ್ತೆಯೊಂದು ಪ್ರಕಟವಾಗಿದೆ.

o o

ಪಂಜಾಬ್ ಶಾಸನ ಸಭೆಗೆ ಕಾಂಗ್ರೆಸಿನ ಪತಿಯಿಂದ ಹುರಿಯಾಳು ಆಗಿದ್ದ ಸೇಟ್ ಸುದರ್ಶನರು ಪ್ರತಿಸ್ಪರ್ಧಿರಹಿತರಾಗಿ ಚುನಾಯಿತರಾದರು.

o o

ಮಾಸ್ಕೋ ಸಮ್ಮೇಳನದಲ್ಲಿ ಅನೇಕ ಪ್ರಾಮುಖ್ಯ ಸಮಸ್ಯೆಗಳು ಪರಿಹಾರವಾಗುವುದಾಗಿ ತಿಳಿಯಬಂದಿದೆ.

o o

ಕಾಲೋನಿಗಳ ಅಭಿವೃದ್ಧಿಗಾಗಿ 12 ಕೋಟಿ ಪೌಂಡುಗಳ ವಿಮಾಸಲುಸ್ನೊಳಗೊಂಡ ಯೋಜನೆಯೊಂದನ್ನು ಬ್ರಿಟನ್ನು ತಯಾರಿಸಿದೆ.

o o

ಆಜಾದ್ ಹಿಂದ್ ಫೌಜಿನ ಬಿಡುಗಡೆಯಾಗಬೇಕೆಂದು ಕಲ್ಕತ್ತಾ ಕಾರ್ಪೊರೇಷನ್ನಿನಲ್ಲಿ ಆದ ನಿರ್ಣಯಕ್ಕೆ ಐರೋಪ್ಯರ ಬೆಂಬಲ ಸಿಕ್ಕಲಿಲ್ಲ.

o o

ಸಿಂಧ್ ಮತ್ತು ಬೆಲೂಚಿಸ್ಥಾನಗಳಲ್ಲಿ ಆಲೆಗಳ ಹಾವಳಿಯಿಂದ ಉಂಟಾದ ಕಷ್ಟನಷ್ಟಗಳ ಬಗ್ಗೆ ಹಣ ಸಂಗ್ರಹಿಸಬೇಕೆಂದು ರಾಷ್ಟ್ರಪತಿ ಆಜಾದರು ಪ ನವಿ ಹೊರಡಿಸಿರುವರು.

ನೆಹರು ಸಭೆಯಲ್ಲಿ ಗೊಂದಲ

ಸಹರಾನಪುರ ನ. 23

ಚುನಾವಣಾ ಪ್ರಚಾರಕ್ಕಾಗಿ ಬಂದಿರುವ ಪಂಡಿತ ನೆಹರು ಇಂದು ಬಂದೂ ಒಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಭಾಷಣಕ್ಕೆ ಮುಂಚೆ ರ್ಯಾಡೀಕಲ್ ಡೆನೊಕ್ರಾಟ್‌ಗಳು ಬಂದೂ ಪ್ರಶ್ನಾವಳಿಯನ್ನು ಮುದ್ರಿಸಿ ಹಂಚಿದ್ದರು. ಪಂಡಿತರಿಗೂ ಒಂದು ಪ್ರತಿ ಕೊಡಲಾಯಿತು. ನೆಹರು ಭಾರತದ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯವನ್ನೇ ಮಾತನಾಡಿದರು. ರಾಡಿಕಲ್ ಪ್ರಶ್ನಾವಳಿಗೂ ಉತ್ತರ ಕೊಡಲಿಲ್ಲ ಕೊನೆಗೆ ಪ್ರೇಕ್ಷಕರಲ್ಲಿ ಹಲವರು ಪ್ರಶ್ನೆ ಹಾಕಿದರು. ನೆಹರು ಕೋಪೋದ್ರಿಕ್ತರಾಗಿ ಉತ್ತರ ಕೊಡಲು ನಿರಾಕರಿಸಿದರು. ಆಗ ಗೊಂದಲವೆದ್ದಿತು. ಹಲವರು ' ಪಂಡಿತರಿಗೆ ಬಿರ್ಲಾ ಎಷ್ಟು ಹಣ ಕೊಟ್ಟಿದ್ದಾರೋ ? ' ಎಂದರು. ಪಂಡಿತರು ಕೋಪದಿಂದ ' ಕೊಟ್ಟಿದ್ದಾರೆ, ನನಗೆ ಬೇಕಾದಷ್ಟು ಕೊಡುತ್ತಾರೆ ' ಎಂದು ಒಪ್ಪಿಕೊಂಡರು. ಸಭೆಯು ಅರ್ಧದಲ್ಲಿ ಕೊನೆಗೊಂಡಿತು— (ಪಿ)

o o

ವಾಕ್ಚೆದಳಕ್ಕೆ ಮುಖ್ಯ ಸೇನಾನಿ ಪ್ರಶಂಸೆ

[ಏ. ಪಿ.] ಜಲಂಧರ್, ಡಿ 2

' ನಾಡಿನ ಜನಜೀವನದಲ್ಲಿ ಸ್ತ್ರೀಯರಿಗೆ ಮುಖ್ಯಸ್ಥಾನವಿದೆ. ಅವರು ಹುರುಪಿನಿಂದ ನಾಡಿಗಾಗಿ ದುಡಿಯಬೇಕು. ಹಾಗೆ ಮಾಡದಿದ್ದರೆ ನಾಡಿನ ಮುನ್ನಡೆ ಸಧಾನವಾಗುತ್ತದೆ. ಭಾರತ ರಕ್ಷಣಾ ಶಾಖೆಯಲ್ಲಿ ವಾಕ್ಚೆ ದಳಗಳನ್ನು ಪ್ರಾಯೋಗ ಮಾಡಲು ಸರ್ವ ಪ್ರಯತ್ನ ಮಾಡುತ್ತೇನೆ. ಇದರಿಂದ ನಮ್ಮ ರಾಷ್ಟ್ರ ಜೀವನದಲ್ಲಿ ಸ್ತ್ರೀಯರು ಮುಖ್ಯ ಪಾತ್ರವಹಿಸಲು ಅವಕಾಶವಾಗುತ್ತದೆ.

o o

ಲಿಂಗವನ್ನು ಒಡಿದಿರುವರು

ಆದವಾನಿಯಲ್ಲಿ ಪ್ರಸಿದ್ಧಿ ಪಡೆದಿದ್ದ ಶಾಂತಿಮೂರ್ತೇಶ್ವರ ಲಿಂಗವನ್ನು ಯಾರೋ ಗೂಂಡಾ ಜನರು ಪುಡಿಪುಡಿಯಾಗಿ ಒಡೆದುಹಾಕಿರುವರು.

.....

ಚಿನ್ನಾ ಬೆಳ್ಳಿ ಧಾರಣೆ

ಸರ್ಹ 1 ಕ್ಕೆ	ರೂ. 56-4-0
ಚಿನ್ನ ತೊಲ 1 ಕ್ಕೆ	82-0-0
ಬೆಳ್ಳಿ	1-6-0

ಆಟಂ ಬಾಂಬಿಗೆ ಒಂದು ಕೈ ಮೇ

ರಷ್ಯಾದ ವಿಜ್ಞಾನಿಗಳು ಭರತ ಖಂಡಕ್ಕೆ ಈಶಾನ್ಯ ದಿಕ್ಕಿನಲ್ಲಿರುವ ಹಿಂದೂಕುಡ್ ಪರ್ವತ ಶ್ರೇಣಿಯಲ್ಲಿ ಸೂರ್ಯ ರಶ್ಮಿಯಿಂದ ಶಕ್ತಿಯನ್ನು ಪಡೆಯಲು ಅತಿ ಸಾಹಸದಿಂದ ಶೋಧನೆ ನಡೆಸಿರುವರು. ಇದು ಫಲಕಾರಿಯಾದರೆ ಆಟಂ ಬಾಂಬು ಆಸಿ|ಮುಂಪೆ ಆಸನ್ನು ನಿಲ್ಲಿಸಿದಂತೆ ಆಗುವುದು.

o o

ಚೂರಿ ಇರಿತದ ಪ್ರಸಂಗ

ಮೈಸೂರು, ಡಿ 14 — ಮೊನ್ನೆ ದಿವಸ ರಾತ್ರಿ ದೇವರಾಜ ಮಾರ್ಕೆಟ್ಟಿನ ಬಲ ಪಾರ್ಶ್ವದಲ್ಲಿರುವ ಸೇಂದಿ ಅಂಗಡಿಯಲ್ಲಿ ಸೋಡಾ ಶೀಪೆಗಳಿಂದ ಹೊಡೆದಾಟ ನಡೆಯುತ್ತಿರಲು ಚೂರಿ ಇರಿತ ಪ್ರಸಂಗದಿಂದ ಒಬ್ಬನ ಸ್ಥಿತಿ ಚಿಂತಾಜನಕವಾಗಿರುವುದಾಗಿಯೂ ತಿಳಿಯಬಂದಿದೆ.

o o

ಜೋಗ್‌ನಲ್ಲಿ ಹೊಡೆದಾಟ

ಕಳೆದ ಮಾಹೆ 29 ರ ಮಧ್ಯರಾತ್ರಿಯಲ್ಲಿ ಜೋಗ್ ವಿದ್ಯುಚ್ಛಕ್ತಿ ಖಾರ್ಕಾನೆಯಲ್ಲಿ ಎರಡು ಸಾವಿರ ಮಂದಿ ಒಡ್ಡರಿಗೂ ಎಂಜಿತ್ತು ಮಂದಿ ಪೆಠಾಣರಿಗೂ ಘರ್ಷಣೆ ನಡೆದು ಅನೇಕರಿಗೆ ತೀವ್ರ ಗಾಯವಾಗಿರುವುದಾಗಿ ತಿಳಿಯಬಂದಿದೆ.

o o

ಮುನ್ನೂರಡಿ ಕೆಲಸವಿದೆ

ತಿನಸೆಮುದ್ರ ವಿದ್ಯುಚ್ಛಕ್ತಿ ನಿಲ್ದಾಣದಲ್ಲಿ ಯಂತ್ರಗಳಿಗೆ ದುರ್ಘಟನೆ ನಡೆದುದು ದುರಸ್ತು ಆಗುತ್ತಿರುವುದಾಗಿಯು ಇನ್ನು ಮುನ್ನೂರು ಅಡಿಗಳಲ್ಲಿ ಕೆಲಸವಿರುವುದಾಗಿಯೂ ತಿಳಿಯಬಂದಿದೆ.

o o

ಗೀತಾ ಸಪ್ತಾಹ

ಮೈಸೂರು, ಡಿ 14 — ಗೀತಾ ಪ್ರಚಾರಣಿ ಸಭೆಯ ಆಶ್ರಯದಲ್ಲಿ ಅಶೋಕ ರೋಡಿನಲ್ಲಿರುವ ಸಭಾ ಮಂದಿರದಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ನಾಳೆಯಿಂದ ಒಂದು ವಾರದವರೆಗೆ ಗೀತಾ ಸಪ್ತಾಹೋತ್ಸವ ಜರುಗುವುದು.

o o

ಗುಬ್ಬಿ ಸಭೆ

ಮೈಸೂರು, ಡಿ 14 — ಇದೇ 19 ರಲ್ಲಿ ಗುಬ್ಬಿ ವಜ್ರೋತ್ಸವ ಸಮಿತಿ ಕಛೇರಿಯಲ್ಲಿ ಗುಬ್ಬಿ ಕಂಪೆನಿ ವಜ್ರೋತ್ಸವವನ್ನು ಮುಂದುವರಿಸುವ ಬಗ್ಗೆ ಸಮಿತಿ ಸಭೆ ಸೇರುವುದು.

City Muncipal Officcs,
Dated Mysore City 6-12-1945.

No. R 8. 913 - 44 - 45

NOTICE

In accordance with the G O No. 3833 - 4 / M I 106 - 45 - 18 dated 15th Nov. fixing the rate of daily fees to be levied for the slaughter of the several classes of animals as noted below in the slaughter-houses in the city municipality, the public are hereby informed that the new rate of slaughtering fees will be levied in the slaughter houses with effect from the 10th December 1945.

Rates of daily fee sanctiond by the Government.

1	Bullocks	0-7-0 per head	(Seven annas)
2	Bull calves	0-7-0 ,, ,, ,,	(Seven annas)
3	Sheep, Goats & Kids	0-5-0 ,, ,, ,,	(Five annas)

(Sd) R. Ramachandra Rao Bhombhore
President

AT Opera— From 14-12-45

FIGHT TO FINISH

— featuring —

Jack Mull Hall — Lola Lane — Frankie Doro

At Ranjit ❁ Sant Tulsi Das

ವಿಷ್ಣುಪಂತ್ ಪಗ್ನೀಸ್, ಲೀಲಾ ಚಿಟ್ನಿಸ್, ವಾಸಂತಿ ಪಾತ್ರವಹಿಸಿರುವ

ನಂತ್ ತುಳಸೀದಾಸ್

ಸೈನಿಕರಿಗಾಗಿ 9 ಕೋಟಿ ರೂ. ನಿಧಿ

ನವ ದೆಹಲಿ ಡಿ 12 — ಯುದ್ಧಾನಂತರದ ಪುನ್ರ್ವಚನಾ ಸೈನ್ಯ ನಿಧಿಯಲ್ಲಿ 9 ಕೋಟಿಗಿಂತ ಹೆಚ್ಚು ದ್ರವ್ಯ ಒಟ್ಟುಗೂಡಿದೆ. ಸೈನಿಕರು ತಾವ್ರತಾವೇ ತಿಂಗಳಿಗೆ ತಲಾ 1 ಆಥವಾ 2 ರೂ. ಗಳಂತೆ ವಸೂಲು ಮಾಡಿ ಈ ನಿಧಿಯನ್ನು ಶೇಖರಿಸಿದ್ದಾರೆ. ಇದರಲ್ಲಿ ಶೇಕಡ 80 ರಷ್ಟು ಭಾ. ಪ್ರಾಂತ ಮತ್ತು ಸಂಸ್ಥಾನಗಳಿಗೆ ವಿಾಸಲು. ವಿಕ್ಕ 20 ರಷ್ಟನ್ನು ಕೇಂದ್ರ ನಿಧಿಯಲ್ಲಿ ಉಳಿಸಲಾಗುತ್ತಿದೆ. ಆಯಾ ಪ್ರಾಂತದ ಗವರ್ನರುಗಳುಳ್ಳ ಸಮಿತಿಗಳು ಈ ಹಣದ ಹಂಚಿಕೆ ವರ್ಷಡಿಸಿರುತ್ತವೆ. ಮುಖ್ಯವಾಗಿ ಸೈನಿಕರ ಉಪಯೋಗಕ್ಕಾಗಿ ಈ ದ್ರವ್ಯವನ್ನು ಬಳಿಸಲಾಗುತ್ತದೆ [ಐ.ಪಿ.

ಹುದ್ಧದ ಹಡಗುಗಳಲ್ಲಿ ಸರಕು ರವಾನೆ

ನವ ದೆಹಲಿ ಡಿ 9— ಯುದ್ಧ ಕಾಲದಲ್ಲಿ ವಿವಿಧ ಸರಕುಗಳು ಯುದ್ಧದ ಹಡಗುಗಳಲ್ಲಿ ರವಾನೆಯಾಗುತ್ತಿದ್ದವು. ಆಗ್ಗೆ ಇವು ಬಹು ಗುಟ್ಟಾಗಿ ನಡೆಯುತ್ತಿತ್ತು. ಈ ಮಹತ್ಸೇವೆಯನ್ನು ಲಂಡನ್ನಿನ ಟ್ರಾನ್ಸ್‌ಪೋರ್ಟ್ ಡೈರೆಕ್ಟರು ಪ್ರಶಂಸಿಸಿದ್ದಾರೆ. (ಐ ಪಿ.)

ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸ್ಟ
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಮೈಸೂರು ಸಿಟಿ ಮುನಿಸಿಪಾಲಿಟಿ

ಮೈ ಸೂ ರು ತಾ || 8–12–45

ಹರಾಜು ನೋಟೀಸು

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಕೃಷ್ಣರಾಜ ವನಂನಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ ' ಮಾಡಲ್ ಹೌಸೆಸ್ ' 8 ಮನೆಗಳನ್ನು ಪಬ್ಲಿಕ್ಕಾಗಿ ತಾ || 23–12–45 ನೇ ಭಾನುವಾರ ದಿವಿ 10 ಘಂಟೆಗೆ ಸದರಿ ಮನೆಗಳ ಬಳಿ ಹರಾಜು ಮಾಡಲ್ಪಡುತ್ತದೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಸವಾಲ್ ಮಾಡಿ, ಸದರಿ ಮನೆಗಳನ್ನು ಪಡೆಯಬಹುದು. ಹೆಚ್ಚಿನ ವಿಚಾರಗಳನ್ನು ಮುನಿಸಿಪಲ್ ಆಫೀಸಿಗೆ ಬಂದು ತಿಳಿಯಬಹುದು.

(ಸಹಿ) ಆರ್. ಎಲ್. ರಾಜು
ಮುನಿಸಿಪಲ್ ಎಂಜಿನಿಯರ್

ರಕ್ತವೃದ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ. ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು.